


ಎಡದಿಂದ ಬಲಕ್ಕೆ

1. ದಾಸಯ್ಯನನ್ನು ಕಂಡರೆ ಆತನಿಗೆ ನಿರ್ಲಕ್ಷ್ಯ, ತಾತ್ಸಾರ (4)
3. ಆ ಪರಿಮಳದ ಜಾಡು ಹಿಡಿದದ್ದು ಭಾರೀ ತಪ್ಪಾಯಿತು (3)
4. ಗುಂಟೂರಿನಲ್ಲಿ ಕಂಡದ್ದು ಎಂಥ ಚರಂಡಿ! (3)
6. ನರ್ತಕರ ಮನದಲ್ಲಿ ರತ್ನ ತುಂಬಿದ ಸಾಗರ (4)
7. ಪರಿಣಯವನ್ನು ಪೂರ್ಣಗೊಳಿಸಿದ್ದು ಪವಿತ್ರ ಓಂಕಾರ (3)
9. ಹಣ್ಣು ತೆಗೆಯಲು ಹೋದವ ದೀಪ ತಂದನೇ? (3)
11. ವರುಣನದೇ ಇರಬೇಕು ಈ ಧ್ವನಿ, ಕೂಗು (3)
13. ಅವನ ಸೋಲಿಗೆ ಕಾರಣ ಈ ಶೋಷಣೆ (3)
15. ಹೊಂಗನಸಿನ ನಡುವೆ ಸುಳ್ಳು ನಗೆ (4)
17. ಮರೆತಿಲ್ಲ ಬಿಡಿ, ಅವನದು ಭಾರೀ ಸೊಕ್ಕು (3)
18. ಸುಲಲಿತವಾಗಿರಲಿ, ಸಂತೈಸು (3)
19. ಪರರತ್ತ ಗಮನ ಬಿಟ್ಟರೆ ಮುನ್ನಡೆ (4)

ಮೇಲಿಂದ ಕೆಳಕ್ಕೆ

1. ಉದ್ಧಾರ ಮಾಡುವುದಿಲ್ಲ ಈ ಹೊಟ್ಟೆ (3)
2. ಗಣ್ಯರೆಲ್ಲರೂ ಗುಂಪು ಸೇರಿದ್ದು ಇದೇ ಶಹರ (3)
3. ಪ್ರಮಾಣ ಪತ್ರ ತಯಾರಿಸುವಲ್ಲಿ ಆತ ನಿಷ್ಣಾತ (3)
5. ರಾಮಾಯಣ ವಾಚನ ಮಾಡುತ್ತಿರುವವ ಆಕೆಯ ಗಂಡ (3)
7. ಪರಿಹಾರ ಕೇಳಿದ್ದಕ್ಕೆ, ಏಟು ಹೊಡೆತ (3)
8. ಆವರಣ ಪ್ರವೇಶಿಸಿದೊಡನೆ ಕಂಡವ 'ಜಲದೇವತೆ' (3)
9. ಹಾರಿಸುವುದು ಬೇಡ, ಪ್ರವಹಿಸುವಂತೆ ಮಾಡು (3)
10. ತರಗೆಲೆ ಮಾರಲಿಕ್ಕೂ ಸುಂಕ ಬೇಕೇ? (3)
12. ವಾಸಂತಿಗೆ ತಕ್ಕ ಮನೆ ಇದೇ ತಾನೇ? (3)
14. ಸುಖವಿರಲಿಲ್ಲ ಎಂಬುದನ್ನು ಬರೆದಿಡು (3)
15. ಪಹರೆ ಕೆಲಸ ಎಂದರೆ ಅವನಲ್ಲಿ ಭಾರೀ ಉತ್ಸಾಹ (3)
16. ಲಗಾಮು ಕಿತ್ತೆಸೆದವ ಅಡಿಯಾಳು, ಜವಾನ (3)

## ಪದಬಂಧ : 24-12-2009ರ ಉತ್ತರಗಳು

ಎಡದಿಂದ ಬಲಕ್ಕೆ

1. ಆದಾಯ; 3. ವಿರಲ; 4. ಜನನಿ; 6. ಅನುಮತಿ; 7. ಅಂದಚೆಂದ; 9. ನಳಪಾಕ; 11. ಪರಧನ; 15. ಕೆಡುಕ; 16. ತರಹ; 17. ರಜತ.

ಮೇಲಿಂದ ಕಳಕ್ಕೆ

1. ಆಲಯ; 2. ಯಜನ; 3. ವಿರಾಮ; 5. ನಿನಾದ; 6. ಅಧೀನ; 8. ದಮನ; 10. ಪಾದುಕೆ; 12. 'ರತ್ತಿಹ'; 13. ಪೆಕರ; 14. ಸತತ.

# ಮಂಗ ವಿಸ್ಮಯ

## 'ಬಬೂನ್'– ಏನು ವಿಶೇಷ?

ಬಬೂನ್– ಅದೊಂದು ಮಂಗ. ಆಫ್ರಿಕದ 'ಸವನ್ನಾ' ಹುಲ್ಲು ಬಯಲಲ್ಲಿ ಅದರ ವಾಸ; ಅಲ್ಲಿನ ಜೀಬ್ರಾ, ಜಿರಾಫೆ, ಚಿರತೆ, ಚಿಗರೆಗಳ ಸಹವಾಸ. ಹಳದಿ ಬಬೂನ್, ಆಲಿವ್ ಬಬೂನ್, ಚಾಕ್ಮಾ ಬಬೂನ್, ಜಲೆಡಾ ಬಬೂನ್, ಹಮಾಡ್ರಿಯಾಸ್ ಬಬೂನ್ ಹಾಗೆಲ್ಲ ಅದರದು ವಿಧವಿಧ ವೈವಿಧ್ಯ.

ಹಾಗೆಂದು ನೀವು ನೋಡಿರುವ ಯಾವ ಮಂಗಕ್ಕೂ ಬಬೂನ್ ಅನ್ನು ಹೋಲಿಸಬೇಡಿ. ಏಕೆಂದರೆ ಈ ಮಂಗಂದು ತುಂಬ ವಿಭಿನ್ನ ರೂಪ; ತುಂಬ ವಿಲಕ್ಷಣ ಜೀವನಕ್ರಮ. ಉದ್ದುದ್ದ ರೋಮಗಳು, ದಟ್ಟವಾಗಿ ಮುಚ್ಚಿದ ಶರೀರ. ಒರಟು ತೊಗಲಿನ ನಾಯಿಯಂಥ ಮುಖ. ಉಬ್ಬಿದ ಹುಬ್ಬುಗಳ ಕೆಳಕ್ಕೆ ಆಳಕ್ಕೆ ನೆಟ್ಟ ಹೊಳೆವ ಕಣ್ಣುಗಳು. ಚೂರಿಗಿಂತ ಚೂಪಾದ ದೃಢ, ಭಯಂಕರ ದಂತಪಂಕ್ತಿ. ಪ್ರತಿ ಪಾದದಲ್ಲೂ ಐದು ಬೆರಳುಗಳು, ಬೆರಳ ಉಗುರುಗಳದೂ ಹಲ್ಲುಗಳಂಥದೇ ದೃಢ ರಚನೆ.



ವಯಸ್ಕ ಹಂತದಲ್ಲಿ ಬಬೂನ್‌ಗಳದು ಸರಾಸರಿ ಇಪ್ಪತ್ತೇಳು ಕಿಲೋ ತೂಕ. ದಷ್ಟಪುಷ್ಟ ಶರೀರ. ಕ್ರೂರ ನೋಟ. ಎದುರಿಸಬರುವ ಯಾವುದೇ ಬೇಟೆಗಾರ ಪ್ರಾಣಿಯನ್ನು ಕ್ಷಣಾರ್ಧದಲ್ಲಿ ಛಿದ್ರಗೊಳಿಸುವ ಶಕ್ತಿ. ಹಲ್ಲುಗಳನ್ನು ಹಿರಿದು, ಉಗುರುಗಳನ್ನು ತೆರೆದು ಬಗುಳುವಂತೆ ಚೀರುತ್ತ ಮುನ್ನುಗ್ಗುವ ಬಬೂನ್ ಅನ್ನು ಸಮೀಪಿಸುವ ಧೈರ್ಯ, ಅದರೊಡನೆ ಸೆಣೆಸಬಲ್ಲ ಶೌರ್ಯ ಚಿರತೆಯಂಥ ಬೇಟೆಗಾರ ಪ್ರಾಣಿಗೂ ಇಲ್ಲ.

ಬಬೂನ್‌ಗಳ ಬದುಕಿನ ಸಾಮರ್ಥ್ಯ ಕಲ್ಪನಾತೀತ. ಅಡವಿಗಳನ್ನು ಕಡಿದರೆ ಅವು ನೆಲದಮೇಲೇ ನೆಲೆಸುತ್ತವೆ. ಹುಲ್ಲು ನೆಲೆಗಳು ಸಿಗದಿದ್ದರೆ ಹೊಲಗಳಿಗೇ ನುಗ್ಗುತ್ತವೆ. ಕಾನನದ ತಂಪಿನಲ್ಲಿರುವಷ್ಟೇ ನೆಮ್ಮದಿಯಾಗಿ ಮರುಭೂಮಿಯ ರಣಬಿಸಿಲಿನಲ್ಲೂ ಬಾಳುತ್ತವೆ. ಹಾಗೆಲ್ಲ ಆಗಿರುವುದರಿಂದಲೇ ಆಫ್ರಿಕದಲ್ಲಿ ದಟ್ಟಡವಿ ಹುಲ್ಲುಗಾವಲುಗಳೆಲ್ಲ ಕ್ಷಿಪ್ರವಾಗಿ ಕ್ಷೀಣಿಸುತ್ತಿದ್ದರೂ, ವನ್ಯಜೀವಿಗಳ ಸಂಖ್ಯೆಯೆಲ್ಲ ಕುಗ್ಗುತ್ತಿದ್ದರೂ ಆ ವಿನಾಶದ ದಳ್ಳುರಿ ಬಬೂನ್‌ಗಳನ್ನು ಸ್ಪರ್ಶಿಸಿಯೂ ಇಲ್ಲ.

ಹೊಂದಾಣಿಕೆಯಷ್ಟೇ ಬಬೂನ್‌ಗಳ ಯಶಸ್ಸಿನ ರಹಸ್ಯ ಅಲ್ಲ. ಏನನ್ನೇ ಆದರೂ ತಿಂದು ಅವು ಬದುಕಬಲ್ಲದು. ಬಬೂನ್‌ಗಳು ದನಗಳಂತೆ ಹುಲ್ಲನ್ನೇ ಮೇಯುತ್ತವೆ; ಹುಲ್ಲಿನಲ್ಲಿ ಅಡಗಿದ ಕೀಟಗಳನ್ನೂ ಅಗಿಯುತ್ತವೆ. ಹಣ್ಣು–ಕಾಯಿಗಳನ್ನೂ, ಹಲ್ಲಿ–ಶಂಬುಕಗಳನ್ನೂ, ಜೇಡ–ಚೇಳುಗಳನ್ನೂ ಜಗಿಯುತ್ತವೆ. ಹಕ್ಕಿ– ಇಲಿ– ಮೊಲಗಳನ್ನೂ ಹಿಡಿಯುತ್ತವೆ. ಚಿಗರೆ–ಕಡವೆಗಳನ್ನೂ ಬೇಟೆಯಾಡುತ್ತವೆ. ಮನುಷ್ಯ ಸದೃಶ ಬುದ್ಧಿವಂತಿಕೆಗಳನ್ನೂ ಪ್ರದರ್ಶಿಸುತ್ತವೆ. ಆದ್ದರಿಂದದಲೇ ಬಬೂನ್‌ಗಳನ್ನು 'ಪ್ರಾಚೀನ ಮಾನವನ ಪಡಿಯಚ್ಚು' ಎಂದೇ ತಜ್ಞರು ಕರೆಯುತ್ತಾರೆ. ಬಬೂನ್‌ನ ವಿಶೇಷ ಇದೇ.

■ ಎನ್. ವಾಸುದೇವ್